**ಕರ್ನಾಟಕಸರ್ಕಾರ**

**ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ,**

**ಸಂಖ್ಯೆ:** ಸಚುಆ/ಅ.ಸೂ–4/2013.

ಕೊಠಡಿ ಸಂಖ್ಯೆ: 243, 2ನೇ ಅಂತಸ್ತು,
ವಿಧಾನ ಸೌಧ, ಡಾ.ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 3 .05.2013.

**ಅಧಿಸೂಚನೆ**

ವಿಷಯ: ಹೊಸದಾಗಿ ನೋಂದಣಿಯಾದ /ಆಡಳಿತ ಮಂಡಳಿ ರದ್ದಾಗಿರುವ ಸಹಕಾರ ಸಂಘಗಳಿಗೆ ಚುನಾವಣೆ ನಡೆಸುವ ಕುರಿತು.

ಉಲ್ಲೇಖ: ಸರ್ಕಾರದ ಆದೇಶ CO 31 CLM 2013, ಬೆಂಗಳೂರು ದಿನಾಂಕ: 15–4–2013.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ,1959(ಕರ್ನಾಟಕ ಅಧಿನಿಯಮ ಸಂಖ್ಯೆ 11/1959)ಕ್ಕೆ ತಂದಿರುವ ತಿದ್ದುಪಡಿ, ಕರ್ನಾಟಕ ಸಹಕಾರ ಸಂಘಗಳ ("ತಿದ್ದುಪಡಿ")ಅಧಿನಿಯಮ 2012 (ಸಂಕ್ಷಿಪ್ತವಾಗಿ ' ತಿದ್ದುಪಡಿ ಅಧಿನಿಯಮ') ದಿನಾಂಕ11-2-2013 ರಿಂದ ಜಾರಿಗೆ ಬಂದಿರುತ್ತದೆ. ಅದರಂತೆ ಹೊಸದಾಗಿ ನೋಂದಣಿಯಾದ ಸಹಕಾರ ಸಂಘಗಳು ಮತ್ತು ಯಾವ ಸಹಕಾರ ಸಂಘದ ಆಡಳಿತ ಮಂಡಳಿಯನ್ನು ರದ್ದುಗೊಳಿಸಲಾಗಿತ್ತೋ ಅಂತಹ ಸಹಕಾರ ಸಂಘಗಳ ಚುನಾವಣೆಯನ್ನು ಸಹಕಾರ ಆಯೋಗದಿಂದಲೇ ನಿಗದಿತ ಅವಧಿಯಲ್ಲಿ ನಡೆಸತಕ್ಕದ್ದಾಗಿರುತ್ತದೆ.

ಸಹಕಾರ ಸಂಘಗಳು ತಿದ್ದುಪಡಿ ಅಧಿನಿಯಮದ ಅವಕಾಶದಂತೆ ಉಪನಿಯಮಗಳಿಗೆ, ಅಧಿನಿಯಮ ಜಾರಿಗೊಳಿಸಿದ ದಿನಾಂಕದಿಂದ 90 ದಿವಸಗಳ ಒಳಗಾಗಿ ತಿದ್ದುಪಡಿ ಮಾಡಿಕೊಳ್ಳುವ ಸ್ಥಿತಿಯಲ್ಲಿ ಇಲ್ಲದಿರುವುದರಿಂದ ಹಾಗೂ ತಿದ್ದುಪಡಿ ಅಧಿನಿಯಮಕ್ಕೆ ನಿಯಮಗಳ ರಚನೆ ಆಗದೇ ಇರುವುದರಿಂದ, ಕಾರ್ಯನಿರ್ವಹಣೆ ದೃಷ್ಟಿಯಿಂದ ಸಹಕಾರ ಚುನಾವಣಾ ಆಯೋಗದ ಪೂರ್ಣಪ್ರಮಾಣದ ರಚನೆ ಆಗದೇ ಇರುವುದ್ದರಿಂದ್ದ ಹಾಗೂ ಹೊಸದಾಗಿ ನೋಂದಣಿ ಆದ ಸಹಕಾರ ಸಂಘಗಳು ಮತ್ತು ಆಡಳಿತ ಮಂಡಳಿ ರದ್ದಾದ ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಚುನಾವಣೆಯನ್ನು, ಸಹಕಾರ ಚುನಾವಣಾ ಆಯೋಗವೇ ನಡೆಸಬೇಕಾಗಿದ್ದು, ಸಹಕಾರ ಚುನಾವಣಾ ಆಯೋಗದ ಕಾರ್ಯನಿರ್ವಹಣೆಗೆ ಪೂರ್ಣಪ್ರಮಾಣದ ರಚನೆ ಆಗದೇ ಇರುವ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರವು ತಿದ್ದುಪಡಿ ಅಧಿನಿಯಮ ಪ್ರಕರಣ 132ರ ಅವಕಾಶದಂತೆ ತೊಂದರೆಯನ್ನು ನಿವಾರಿಸುವ ದೃಷ್ಟಿಯಿಂದ ಕರ್ನಾಟಕ ಸಹಕಾರ ಸಂಘಗಳು(ತೊಂದರೆಯನ್ನು ನಿವಾರಿಸುವ) ಆದೇಶ 2013 ಅನ್ನು ದಿನಾಂಕ:15–4–2013ರಲ್ಲಿ ಹೊರಡಿಸಿದ್ದು ಸದರಿ ಆದೇಶವು ಕೂಡಲೇ ಜಾರಿಗೆ ಬಂದಿರುತ್ತದೆ. ಅದರಂತೆ

1. 2012ರ ತಿದ್ದುಪಡಿ ಅಧಿನಿಯಮ ಪ್ರಕರಣ 6ರಲ್ಲಿ ಏನೇ ಇದ್ದರೂ ಸಹಕಾರ ಸಂಘಗಳ ಉಪನಿಯಮಗಳನ್ನು ತಿದ್ದುಪಡಿ ಮಾಡಿಕೊಳ್ಳುವ ಅವಧಿಯನ್ನು ದಿನಾಂಕ: 31-10–2013ರವರೆಗೆ ವಿಸ್ತರಿಸಲಾಗಿದೆ.

2. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 28A ದ ಉಪ ಪ್ರಕರಣ (4)ರಲ್ಲಿ ಏನೇ ಇದ್ದರೂ ದಿನಾಂಕ:30–09–2013ಕ್ಕೆ ಮುಂಚೆ ಚುನಾವಣೆಗೆ ಬಾಕಿ ಇರುವ ಹೊಸದಾಗಿ ನೋಂದಣಿಯಾಗಿರುವ ಸಹಕಾರ ಸಂಘದ ಆಡಳಿತ ಮಂಡಳಿ ಮತ್ತು ಪದಾಧಿಕಾರಿಗಳ ಚುನಾವಣೆ ನಡೆಸುವಿಕೆಯನ್ನು ದಿನಾಂಕ:30–09–2013ರವರೆಗೆ ವಿಸ್ತರಿಸಲಾಗಿದೆ.

3. ಅಧಿನಿಯಮ ಪ್ರಕರಣ 30ರ ಮೇರೆಗೆ ಆಡಳಿತ ಸಮಿತಿ ರದ್ದಾದ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ಕ್ಕೆ 2012ರಲ್ಲಿ ತಿದ್ದುಪಡಿ

ಮಾಡಿರುವ ಅಧಿನಿಯಮದಂತೆ ದಿನಾಂಕ:30-09-2013ರವರೆಗೆ ಬಾಕಿಯಾಗುವ ಚುನಾವಣೆ ಗಳನ್ನು ದಿನಾಂಕ: 30-09-2013ರವರೆಗೆ ವಿಸ್ತರಿಸಲಾಗಿದೆ.

2012ರಲ್ಲಿ ತಿದ್ದುಪಡಿಯಾದ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮಕ್ಕೆ ನಿಯಮಗಳನ್ನು ರಚಿಸುವ ಬಗ್ಗೆ ರಾಜ್ಯ ಸರ್ಕಾರವು ಕ್ರಮ ಕೈಗೊಂಡಿದ್ದು, ಈ ಹಿನ್ನೆಲೆಯಲ್ಲಿ ಕರಡು ನಿಯಮಗಳನ್ನು ಅಧಿಸೂಚನೆ ಸಂಖ್ಯೆ Co.14.CLM.2013, ದಿನಾಂಕ:20-04-2013ಅನ್ನು ಕರ್ನಾಟಕ ರಾಜ್ಯದ ವಿಶೇಷ ರಾಜ್ಯಪತ್ರದಲ್ಲಿ ದಿನಾಂಕ 20-04-2013ರಲ್ಲಿ ಈಗಾಗಲೇ ಪ್ರಕಟಿಸಲಾಗಿದ್ದು, ಸಲಹೆಗಳು/ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಪ್ರಕಟಣೆ ಹೊರಡಿಸಿದ 30 ದಿವಸಗಳ ಒಳಗೆ ಸರ್ಕಾರಕ್ಕೆ ತಿಳಿಸುವಂತೆ ಸರ್ಕಾರವು ಪ್ರಕಟಣೆ ನೀಡಿರುತ್ತದೆ. ನಿಯಮಗಳ ರಚನೆ ಅಂತಿಮವಾದ ಕೂಡಲೇ ಸಹಕಾರ ಚುನಾವಣಾ ಆಯೋಗವು ಸಹಕಾರ ಸಂಘಗಳ ಆಡಳಿತಮಂಡಳಿಗೆ ಚುನಾವಣೆ ನಡೆಸುವ ಬಗ್ಗೆ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಹೊಸದಾಗಿ ನೋಂದಣಿಯಾದ ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಚುನಾವಣೆ ಮತ್ತು ಆಡಳಿತ ಸಮಿತಿ ರದ್ದಾದ ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಚುನಾವಣೆ ನಡೆಸುವ ಬಗ್ಗೆ ಮೇಲ್ಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸಂಘಗಳಿಗೆ ಸೂಕ್ತ ಮಾರ್ಗದರ್ಶನ ನೀಡುವಂತೆ ಸಹಕಾರ ಇಲಾಖಾಧಿಕಾರಿಗಳಿಗೆ ಸೂಚಿಸಿದೆ.

(ಎನ್.ಸಿ. ಮುನಿಯಪ್ಪ)
ಸಹಕಾರ ಚುನಾವಣಾ ಆಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.

ಇವರಿಗೆ:

1. ಸಹಕಾರ ಸಂಘಗಳ ನಿಬಂಧಕರು, #1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-560 052 ಇವರಿಗೆ ಸೂಕ್ತ ಕ್ರಮಕ್ಕಾಗಿ
2. ಸಹಕಾರ ಸಂಘಗಳ ಅಪರ ನಿಬಂಧಕರು( ) ಕೇಂದ್ರ ಕಚೇರಿ, ಬೆಂಗಳೂರು
3. ಸಹಕಾರ ಸಂಘಗಳ ಜಂಟಿ ನಿಬಂಧಕರು, . . . . . . . . . . . . . . . ಪ್ರಾಂತ, . . . . . . . . . . . . .
4. ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪ ನಿಬಂಧಕರುಗಳಿಗೆ ಸೂಕ್ತ ಕ್ರಮಕ್ಕಾಗಿ
5. ವ್ಯವಸ್ಥಾಪಕ ನಿರ್ದೇಶಕರು, ರಾಜ್ಯ ಮಟ್ಟದ ಎಲ್ಲಾ ಸಹಕಾರ ಸಂಸ್ಥೆಗಳು
6. ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ.,
7. ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿಯಮಿತ
8. ನಿರ್ದೇಶಕರು, ಸಹಕಾರಿ ಲೆಕ್ಕಪರಿಶೋಧನಾ ಇಲಾಖೆ, ಬೆಂಗಳೂರು
9. ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು
10. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ಕೈಮಗ್ಗ ಜವಳಿ ನಿರ್ದೇಶಕರು, ಬೆಂಗಳೂರು
11. ನಿರ್ದೇಶಕರು, ಮೀನುಗಾರಿಕೆ ನಿರ್ದೇಶನಾಲಯ, ಬೆಂಗಳೂರು
12. ನಿರ್ದೇಶಕರು, ರೇಷ್ಮೆ ಇಲಾಖೆ, ಬೆಂಗಳೂರು
13. ಭೂ ಅಭಿವೃದ್ಧಿ ಅಧಿಕಾರಿ (ಸಹಕಾರ), ಕಾಡಾ, . . . . . . . . . . . . . . . . . . . . .

ಪ್ರತಿ:-

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-01

ಬಿವಿ